# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **67** |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | **27-01-2026** |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳ ಸಚಿವರು |

| ಕ್ರಮ. ಸಂ:. | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು ಜಿಲ್ಲೆಯಲ್ಲಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ರೋಗಗ್ರಸ್ಥ ಮತ್ತು ಮುಚ್ಚಿ ಹೋಗಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಜುಲೈ 2020 ರಿಂದ ಎಂ.ಎಸ್.ಎಂ.ಇ ಉದ್ಯಮಗಳ ನೊಂದಣಿಯನ್ನು ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ಮಾಡಲಾಗುತ್ತಿದೆ.<br><br>ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ದಿನಾಂಕ:23.01.2026 ರ ಅಂತ್ಯಕ್ಕೆ ಮೈಸೂರು ಜಿಲ್ಲೆಯಲ್ಲಿ ಒಟ್ಟು 1,41,523 ಎಂ.ಎಸ್.ಎಂ.ಇ ಗಳು ನೋಂದಣಿಯಾಗಿದ್ದು ಅವುಗಳ ಪೈಕಿ 1,40,169 ಸೂಕ್ಷ್ಮ, 1292 ಸಣ್ಣ ಹಾಗೂ 62 ಮಧ್ಯಮ ಉದ್ಯಮಗಳಾಗಿರುತ್ತವೆ. |
| ಆ) | ರೋಗಗ್ರಸ್ಥ ಕೈಗಾರಿಕೆಗಳ ಪುನಃಶ್ಚೇತನ ಯೋಜನೆ ನೀತಿ ಇದೆಯೇ; ಇದ್ದರೆ ಪ್ರತಿ ನೀಡುವುದು; | ರೋಗಗ್ರಸ್ತ ಕೈಗಾರಿಕೆಗಳ ಪುನಃಶ್ಚೇತನ ಯೋಜನೆ. ನೀತಿ ಇರುವುದಿಲ್ಲ. |
| ಇ) | ರೋಗಗ್ರಸ್ಥ ಕೈಗಾರಿಕಾ ಪುನಃಶ್ಚೇತನ ಯೋಜನಾ ಸಮಿತಿ ರಚನೆಯಾಗಿದೆಯೇ; | ರೋಗಗ್ರಸ್ತ ಕೈಗಾರಿಕಾ ಪುನಃಶ್ಚೇತನ ಯೋಜನಾ ಸಮಿತಿ ರಚನೆಯಾಗಿಲ್ಲ. |
| ಈ) | ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಬನ್ನಿಮಂಟಪ ಕೈಗಾರಿಕಾ ಪ್ರದೇಶ ಎ ಮತ್ತು ಬಿ ಬಡಾವಣೆ, ಯಾದಗಿರಿ ಕೈಗಾರಿಕಾ ಪ್ರದೇಶದ ಹಾಗೂ ಇಂಡಸ್ಟ್ರಿಯಲ್ ಸಬರ್ಬ್, ವಿಶ್ವೇಶ್ವರ ನಗರ ಕೈಗಾರಿಕಾ ಪ್ರದೇಶಗಳು ಎಷ್ಟೆಷ್ಟು ಎಕರೆ ಪ್ರದೇಶದಲ್ಲಿದೆ; ಎಷ್ಟು ಕೈಗಾರಿಕೆಗಳು | ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಯಾದವಗಿರಿಯಲ್ಲಿ ಒಟ್ಟು 42.29 ಎಕರೆ ಪ್ರದೇಶದಲ್ಲಿ ನಿಗಮದ ವತಿಯಿಂದ ಕೈಗಾರಿಕಾ ವಸಾಹತುವನ್ನು ನಿರ್ಮಾಣ ಮಾಡಲಾಗಿದೆ. |

| | | |
|---|---|---|
| | ಇಲ್ಲಿ ಕಾರ್ಯ ನಿರ್ವಹಿಸುತ್ತಿವೆ; ಪುರುಷ ಮತ್ತು ಮಹಿಳಾ ಕಾರ್ಮಿಕರ ಸಂಖ್ಯೆ ತಿಳಿಸಿ; | ಸದರಿ ಕೈಗಾರಿಕಾ ವಸಾಹತುವಿನಲ್ಲಿ ಒಟ್ಟು 284 ಕೈಗಾರಿಕಾ ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದು, ಅವುಗಳಲ್ಲಿ ಅಂದಾಜು 1340 ಪುರುಷ ಮತ್ತು 790 ಮಹಿಳಾ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ. |
| ಊ) | ಈ ಪ್ರದೇಶಗಳ ಮೂಲ ಸೌಲಭ್ಯ ರಸ್ತೆ, ಹೊರ ಚರಂಡಿ ಉನ್ನತೀಕರಣಗೊಳಿಸಲು ಕೈಗಾರಿಕಾ ಇಲಾಖೆಯಿಂದ ನಗರ ಪಾಲಿಕೆಗೆ ಆರ್ಥಿಕ ನೆರವು ನೀಡಲು ಕ್ರಮ ಕೈಗೊಳ್ಳಲಾಗುವುದೇ? | ಸದರಿ ಕೈಗಾರಿಕಾ ವಸಾಹತುವಿನ ಮೂಲ ಸೌಲಭ್ಯಗಳಾದ ರಸ್ತೆ, ಹೊರ ಚರಂಡಿ, ನೀರು ಸರಬರಾಜು, ಬೀದಿದೀಪ ಇತ್ಯಾದಿಗಳ ನಿರ್ವಹಣೆಯನ್ನು ಮೈಸೂರು ಮಹಾನಗರ ಪಾಲಿಕೆ ವತಿಯಿಂದ ನಿರ್ವಹಿಸಲಾಗುತ್ತಿದ್ದು, ಸದರಿ ಕೈಗಾರಿಕಾ ವಸಾಹತುವನ್ನು ದಿನಾಂಕ 31.03.1978 ರಲ್ಲಿಯೇ ಮೈಸೂರು ಮಹಾನಗರಪಾಲಿಕೆಗೆ ಹಸ್ತಾಂತರಿಸಲಾಗಿದೆ. |

**ಸಿಐ 08 ಎಸ್ಎಸ್ಐ 2026**

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು